# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಿನಾಂಕ: 20/03/2021 ರಂದು ಬೆಳಿಗ್ಗೆ 11.00 ಗಂಟೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಿಂಗಸಂದ್ರ ವಾರ್ಡ್ ಸಂಖ್ಯೆ-191 ರ ವಾರ್ಡ್ ಸಮಿತಿ ಸಭೆಯನ್ನು ಮಾನ್ಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳಾದಂತಹ ಶ್ರೀ.ಪ್ರಸನ್ನಕುಮಾರ.ವಿ. ಉಪ-ಆಯುಕ್ತರು ರವರ ಸಮ್ಮುಖದಲ್ಲಿ ಅವರ ಅನುಮತಿಯೊಂದಿಗೆ ವಾರ್ಡ್ ಸಮಿತಿ ಸಭೆಯನ್ನು ನಡೆಸಲಾಯಿತು.

ಪ್ರಾರಂಭದಲ್ಲಿ ವಾರ್ಡ್ ಸಮಿತಿ ಕಾರ್ಯದರ್ಶಿ ಶ್ರೀ.ಜಿ.ಹೆಚ್.ಮಲ್ಲಾಪುರ, ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ-191, ಸಿಂಗಸಂದ್ರ ರವರು ಸಭೆಗೆ ಹಾಜರಾಗಿದ್ದಂತಹ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು, ಹಾಗೂ ಇತರರನ್ನು ಸ್ವಾಗತಿಸಿ ಕಾರ್ಯಕ್ರಮ ಪ್ರಾರಂಭಿಸಿದರು.

ಹಾಗೂ ಹಿಂದಿನ ಸಭೆಯ ನಡಾವಳಿಗಳನ್ನು ಸಭೆಯಲ್ಲಿ ಮಂಡಿಸಿ ಸಂಬಂಧಪಟ್ಟ ಅಧಿಕಾರಿಗಳಿಂದ ಹಿಂದಿನ ಸಭೆಯ ನಡಾವಳಿಗಳ ಪಾಲನೆಯ ಬಗ್ಗೆ ಮಾಹಿತಿ ಪಡೆಯಲಾಯಿತು. ಅದರಂತೆ ಇಂದಿನ ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳು ಈ ಕೆಳಕಂಡಂತಿರುತ್ತದೆ.

1. ಕೋವಿಡ್-19 ಮಹಾಮಾರಿ ಸಾಂಕ್ರಾಮಿಕರೋಗ ಹರಡದಂತೆ ಮುಂಜಾಗೃತಾ ಕ್ರಮ ಕೈಗೊಳ್ಳಲು ತೆಗೆದುಕೊಳ್ಳಬಹುದಾದ ಕ್ರಮಗಳು.

2. ವಿಪತ್ತು ನಿರ್ವಹಣಾ ಸಮಿತಿ(ಡಿಸಾಸ್ಟರ್ ಮ್ಯಾನೇಜ್‌ಮೆಂಟ್ ಕಮಿಟಿ) ನಿರ್ವಹಿಸಬೇಕಾದ ಕ್ರಮಗಳ ಬಗ್ಗೆ.

3. ಘನತ್ಯಾಜ್ಯ ನಿರ್ವಹಣೆ ಬಗ್ಗೆ ಚರ್ಚಿಸುವುದು.

4. ವಾರ್ಡ್‌ನ ಕುಂದುಕೊರತೆಗಳ ಬಗ್ಗೆ ಚರ್ಚಿಸುವುದು,

5. ಮಳೆಯಿಂದ ಸಂಭವಿಸಿದ/ಸಂಭವಿಸಬಹುದಾದ ಅನಾಹುತಗಳ ಬಗ್ಗೆ ಕ್ರಮ ಕೈಗೊಳ್ಳುವ ಬಗ್ಗೆ ಚರ್ಚಿಸುವುದು,

6. BWSSB Project ಮತ್ತು ನಿರ್ವಹಣೆಯ ಬಗ್ಗೆ ಚರ್ಚಿಸುವುದು,

7. ಕುಡಿಯುವನೀರು ಸರಬರಾಜು ಬಗ್ಗೆ ಚರ್ಚಿಸುವುದು,

8. ಗೇಲ್ ಗ್ಯಾಸ್ ಪೈಪ್‌ಲೈನ್ ನಿರ್ವಹಣೆಯ ಬಗ್ಗೆ ಚರ್ಚಿಸುವುದು,

Scanned with CamScanner

ವಾರ್ಡ್ ನಂ 191 ವಾರ್ಡ್ ಸಮಿತಿ ಸಭೆಯಲ್ಲಿ ಹಾಜರಿದ್ದವರು

| ಕ್ರ.ಸಂ | ಹೆಸರು | ಹುದ್ದೆಯ ಹೆಸರು | ಮೊಬೈಲ್ ನಂಬರ್ |
|---|---|---|---|
| 1 | ಶ್ರೀ.ಪ್ರಸನ್ನಕುಮಾರ. ವಿ. | ನೋಡಲ್ ಅಧಿಕಾರಿಗಳು | 9480683467 |
| 2 | ಶ್ರೀ.ಜಿ.ಹೆಚ್.ಮಲ್ಲಾಪುರ | ಕಾರ್ಯದರ್ಶಿ (ಸಹಾಯಕ ಅಭಿಯಂತರರು) | 9448766888 |
| 3 | ಮೋಹನ್ ಕುಮಾರ್ ಎಸ್ | ಎ.ಇ ಬೆಸ್ಕಾಂ | 9449841578 |
| 4 | ಶ್ರೀ ಮಹೇಶ್‌ಕುಮಾರ್ | ಜೆ.ಹೆಚ್.ಐ. | 9379344125 |
| 5 | ನಟರಾಜ್ ಬಿ.ಸಿ | ವಾಟರ್ ಇನ್ಸ್ ಪೆಕ್ಟರ್ | 9900095697 |
| 6 | ನಾಗರಾಜು ವಿ | ಅಸಿಸ್ಟೆಂಟ್ | 9538455447 |
| 7 | ಶಂಕರ್ ಕೆ.ಎಸ್ | ಸದಸ್ಯರು | 9845393765 |

ವಾರ್ಡ್ ನಂ 191 ವಾರ್ಡ್ ಸಮಿತಿ ಸಭೆಯಲ್ಲಿ ಗೈರು ಹಾಜರಾದವರು

| ಕ್ರ.ಸಂ. | ವಾರ್ಡ್ ಸಮಿತಿ ಸದಸ್ಯರುಗಳ ಹೆಸರು | ಪದನಾಮ | ಮೊಬೈಲ್ ನಂಬರ್ |
|---|---|---|---|
| 1 | ಶ್ರೀ.ಚಂದ್ರಶೇಖರ್ | ತೋಟಗಾರಿಕೆ ಅಧೀಕ್ಷಕರು | 9845014293 |
| 2 | ಶ್ರೀ.ವಿನಯ್ | ಸ.ಕಾ.ಅ. ಬಿ.ಎಮ್.ಆರ್.ಸಿ.ಎಲ್. | 9480823156 |
| 3 | ಶ್ರೀ.ಸಂತೋಷ್ ಕುಮಾರ್ | ಸ.ಕಾ.ಅ. ಘನತ್ಯಾಜ್ಯ ನಿರ್ವಹಣಾ ವಿಭಾಗ | 9480685632 |
| 4 | ಶ್ರೀ.ರಮೇಶ್. | ಎ.ಇ.ಇ. ಮೇಜರ್‌ರೋಡ್ | 9108028820 |
| 5 | ಶ್ರೀ.ಜಿ.ರಾಜಪ್ಪ | ತೆರಿಗೆ ವಸೂಲಿಗಾರರು | 9880430686 |
| 6 | ನಾಗರಾಜ ಹಾವನೂರ | ಪಿ.ಎಸ್.ಇ ಪರಪ್ಪನ ಅಗ್ರಹಾರ | 9148886195 |
| 7 | ರವಿ | ಗೇಲ್ ಗ್ಯಾಸ್ | 9866529367 |
| 8 | ಶ್ರೀ.ತಮ್ಮಯ್ಯ. ಎ.ಇ. | ಎಸ್.ಡಬ್ಲ್ಯೂ.ಡಿ | 9945522330 |
| 9 | ಶ್ರೀ.ಶ್ರೀನಿವಾಸಲು | ಟಿ.ಐ ಕೂಡ್ಲು | 9845496371 |
| 10 | ಶ್ರೀ.ವಿಕ್ರಾಂತ್ ಕೆ | ಸಹಾಯಕ ಅಭಿಯಂತರರು ಬೃಹತ್ ನೀರುಗಾಲುವೆ | 9742916593 |
| 11 | ಶ್ರೀ.ಪರಮೇಶ್ | ತೋಟಗಾರಿಕೆ | 9886481007 |
| 12 | ಶ್ರೀ.ಹೆಚ್.ಜಿ ಅಶ್ವಥ್ | ಅಸೆಸ್ಸರ್ | 9449343200 |
| 13 | ಶ್ರೀ.ರಾಜು | ಟಿ.ಐ ನಾಗನಾಥಪುರ | 9448735507 |

Scanned with CamScanner

| | | | |
|---|---|---|---|
| 14 | ಶ್ರೀ.ಸೆಂದಿಲ್ ಕುಮಾರ್ | ಟಿ.ಐ ಸಿಂಗಸಂದ್ರ | 9448984567 |
| 15 | ಶ್ರೀಮತಿ.ಉಷಾ ರಾಣಿ ಕೆ | ಎ.ಇ (ಲೇಕ್) ಕೆರೆ | 9886046498 |
| 16 | ಶ್ರೀ.ಸುರೇಶ್ ಬಾಬು | ಅಸೆಸ್ಸರ್ | 9449611621 |
| 17 | ಶ್ರೀ.ರಾಜಪ್ಪ | ಟಿ.ಐ | 9880430686 |
| 18 | ಶ್ರೀ.ಚಿಕ್ಕಮುನಿಯಪ್ಪ | ಸದಸ್ಯರು | 9845426669 |
| 19 | ಶ್ರೀ.ಮಹೇಶ್.ಜೆ.ಆರ್ | ಅರಣ್ಯ ವಲಯ ಅಧಿಕಾರಿ | 9742612471 |
| 20 | ಸಾಯಿಬಣ್ಣ. ಎ.ಇ. | ಬಿ,ಡಬ್ಲ್ಯೂ.ಎಸ್.ಎಸ್.ಬಿ. ಎ.ಇ | 9845444039 |
| 21 | ಸಂತೋಷ ಕುಮಾರ್ | ಎ.ಆರ್.ಒ (ಬೇಗೂರು) | 7259653938 |
| 22 | ವಿನಯ ಕುಮಾರಿ ಜೆ.ಕೆ | ಬಿ,ಡಬ್ಲ್ಯೂ.ಎಸ್.ಎಸ್.ಬಿ. ಎ.ಇ.ಇ | 9686566945 |
| 23 | ಶ್ರೀ.ಕೆ.ಬಿ. ಮಂಜುನಾಥ | ಸದಸ್ಯರು | 9845252999 |

ಸಭೆಯ ನಡಾವಳಿಗಳು

1. ವಾರ್ಡ್ ನಂ 191 ಸಿಂಗಸಂದ್ರ ವಾರ್ಡ್‌ನಲ್ಲಿ ಪ್ರಪ್ರಥಮವಾಗಿ ಒಳಚರಂಡಿ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸುತ್ತಿಲ್ಲ, ಒಂದು ಲೇಔಟ್‌ನಲ್ಲಿ ಮಾಡುವ ಕೆಲಸವನ್ನು ಪೂರ್ಣವಾಗಿ ನಿರ್ವಹಿಸದೆ, ಇನ್ನೊಂದು ಲೇಔಟ್ ನಲ್ಲಿ ಕೆಲಸವನ್ನು ಪ್ರಾರಂಭಿಸಿ, ಅದೂ ಕೂಡ ಪೂರ್ಣವಾಗಿ ನಿರ್ವಹಿಸದೆ ಅಲ್ಲಲ್ಲಿ ಕೆಲಸವನ್ನು ಮಾಡಿಕೊಂಡು ಇಡೀ ರಸ್ತೆಯನ್ನೇ ಹಾಳು ಮಾಡುತ್ತಿದ್ದಾರೆಂದು ಸ್ಥಳಿಯರ ದೂರಾಗಿತ್ತು. ಒಂದು ಕಡೆ ನಿರ್ವಹಿಸುತ್ತಿದ್ದ ಕೆಲಸವನ್ನು ಪೂರ್ಣವಾಗಿ ಕಾರ್ಯ ನಿರ್ವಹಿಸಿಕೊಂಡು ಹೋಗಬೇಕೆಂದು ಬಿ,ಡಬ್ಲ್ಯೂ.ಎಸ್.ಎಸ್.ಬಿ. ಎ.ಇ.ಇ ರವರಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.

2. ರಾಮಾಂಜನೆಯ ಲೇಔಟ್‌ನಲ್ಲಿ ಕೂಡ ಒಳಚರಂಡಿ ವ್ಯವಸ್ಥೆ ಒಂದು ರೋಡ್‌ನಲ್ಲಿ ಮಾಡಿದ್ದು, ಇನ್ನು 2 ರೋಡ್‌ಗಳಲ್ಲಿ ಒಳಚರಂಡಿ ವ್ಯವಸ್ಥೆ ಕಾರ್ಯ ನಿರ್ವಹಿಸಿಲ್ಲವೆಂದು ಸ್ಥಳಿಯರು ದೂರನ್ನು ನೀಡಿದರು. ಹಾಗೆಯೇ ಕಾವೇರಿ ಲೇಔಟ್‌ನಲ್ಲಿ ಮೋರಿ ಮಾಡಿಲ್ಲ, ಮತ್ತು ರೋಡ್ ಕೂಡ ಮಾಡಿರುವುದಿಲ್ಲ ಎಂದು ಗ್ರಾಮಸ್ಥರ ದೂರಾಗಿತ್ತು. ಅದಕ್ಕೆ ನೋಡಲ್ ಅಧಿಕಾರಿಗಳು ಬಿ,ಡಬ್ಲ್ಯೂ.ಎಸ್.ಎಸ್.ಬಿ. ಎ.ಇ ಮತ್ತು ಎ.ಇ.ಇ ರವರಿಗೆ ಅಲ್ಲಿಯ ಸಮಸ್ಯೆಯನ್ನು ಬಗೆಹರಿಸಲು ಸೂಚಿಸಿದರು. ಹಾಗೆಯೇ ಕಾವೇರಿ ನೀರಿನ ಕನೆಕ್ಷನ್ ಕೊಟ್ಟು 2 ವರ್ಷವಾಗಿದ್ದು, ಇನ್ನೂ ನೀರಿನ ವ್ಯವಸ್ಥೆ ಮಾಡಿಲ್ಲವೆಂದು ಸ್ಥಳಿಯರು ವಿಚಾರಿಸಿದರು. ಅದೆಲ್ಲವನ್ನು ಚೆಕ್ ಮಾಡಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡಲು ನೋಡಲ್ ಅಧಿಕಾರಿಗಳು ಸೂಚಿಸಿದರು.

Scanned with CamScanner

3. ಸಾಯಿಬಾಬಾ ಲೇಔಟ್ ಮೀನಾಕ್ಷಿ ಲೇಔಟ್ ಎದುರು ಕುಡಿಯುವ ನೀರಿನ ಸಮಸ್ಯೆ ಇದೆ ಎಂದು ಸ್ಥಳಿಯರು ತಮ್ಮ ಅಳಲನ್ನು ತೋಡಿಕೊಂಡರು. ಬಿ,ಡಬ್ಲ್ಯೂ.ಎಸ್.ಎಸ್.ಬಿ. ಎ.ಇ ರವರಿಗೆ ನೋಡಲ್ ಅಧಿಕಾರಿಗಳು ನೀರಿನ ವ್ಯವಸ್ಥೆ ಮಾಡಿಕೊಡಲು ಸೂಚಿಸಿದರು.

4. ಸಾಯಿಪೂರ್ಣ ಅಪಾರ್ಟ್‌ಮೆಂಟ್ ಹತ್ತಿರ ಮರವಿದ್ದು, ವಾಹನ ಸವಾರರಿಗೆ ತುಂಬಾ ತೊಂದರೆಯಾಗಿದೆ. ದಿನಾಲು ನಾಲ್ಕೈದು ಜನರು ಬೀಳುತ್ತಿದ್ದಾರೆ ಎಂದು ಸಾರ್ವಜನಿಕರು ತಿಳಿಸಿದರು. ಮರದ ಬಗ್ಗೆ ಗಮನಹರಿಸಲು ನೋಡಲ್ ಅಧಿಕಾರಿಗಳು ಅರಣ್ಯ ಅಧಿಕಾರಿಗಳಿಗೆ ಸೂಚಿಸಿದರು.

5. ರಸ್ತೆಯ ಬದಿಯಲ್ಲಿರುವ ಗಿಡಗಳು ಒಣಗುತ್ತಿವೆ. ಅದಕ್ಕೆ ನೀರು ಹಾಕಲು ಅರಣ್ಯಾಧಿಕಾರಿಗಳಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.

6. ಪಿ.ಎಂ. ಸ್ವಾನಿಧಿ ಸ್ಕೀಮ್ ನಲ್ಲಿ ಬೀದಿ ಬದಿ ವ್ಯಾಪಾರ ಮಾಡುವವರಿಗೆ ಸಾಲ ನೀಡಲು ನೋಡಲ್ ಅಧಿಕಾರಿಗಳು ಸಹಾಯಕ ಕಂದಾಯ ಅಧಿಕಾರಿಗಳಿಗೆ ಸೂಚಿಸಿದರು.

7. ಮಾರ್ಚ್ ಒಳಗೆ ಬಾಕಿ ಇರುವ ಕಂದಾಯವನ್ನು ವಸೂಲು ಮಾಡಲು ಸಹಾಯಕ ಕಂದಾಯ ಅಧಿಕಾರಿಗಳಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.

8. ಸಿಲ್ವರ್ ಕೌಂಟಿ ಮುಖ್ಯರಸ್ತೆ (ಮೇಜರ್ ರೋಡ್) ಎರಡು ಬದಿಯಲ್ಲಿ ಚರಂಡಿ ನಿರ್ಮಿಸಿ ರಸ್ತೆ ಡಾಂಬರೀಕರಣ ಕಾಮಗಾರಿ ಪ್ರಗತಿಯಲ್ಲಿದ್ದು, ರಸ್ತೆಯ ಮಧ್ಯಭಾಗದಲ್ಲಿ ವಿದ್ಯುತ್ ಕಂಬಗಳು ಇದ್ದು, ಸಾರ್ವಜನಕರಿಗೆ ಹಾಗೂ ವಾಹನ ಸಂಚಾರಕರಿಗೆ ತುಂಬಾ ತೊಂದರೆಯಾಗುತ್ತಿದ್ದು, ಸದರಿ ವಿದ್ಯುತ್ ಕಂಬಗಳನ್ನು ಸಾರ್ವಜನಿಕರಿಗೆ ತೊಂದರೆಯಾಗದ ಹಾಗೆ ರಸ್ತೆಯ ಒಂದು ಬದಿಗೆ ವರ್ಗಾಹಿಸಲು ಬೆಸ್ಕಾಂ ಅಧಿಕಾರಿಗಳಿಗೆ ತಮ್ಮ ಕಛೇರಿಯ ಅನುಧಾನದಿಂದ ಕಾಮಗಾರಿ ನಿರ್ವಹಿಸಿಕೊಡಲು ನೋಡಲ್ ಅಧಿಕಾರಿಗಳು ವಾರ್ಡ್ ಸಮಿತಿ ಸಭೆಯಲ್ಲಿ ಇ.ಇ. ಬೆಸ್ಕಾಂ ಅವರಿಗೆ ಸೂಚಿಸಲಾಯಿತು.

9. ಸಿಲ್ವರ್ ಕೌಂಟಿ ಮುಖ್ಯರಸ್ತೆ ಪಾದಚಾರಿ ಮಾರ್ಗದಲ್ಲಿ ಅನಧಿಕೃತವಾಗಿ ಪೆಟ್ಟಿ ಅಂಗಡಿಗಳು ನಿರ್ಮಾಣವಾಗಿದ್ದು, ಇದರಿಂದ ಪಾದಚಾರಿಗಳಿಗೆ ಹಾಗೂ ವಾಹನ ಸಂಚಾರಕ್ಕೆ ತುಂಬಾ ತೊಂದರೆಯಾಗುತ್ತಿದ್ದು, ಸದರಿ ಪೆಟ್ಟಿ ಅಂಗಡಿಗಳನ್ನು ತೆರವುಗೊಳಿಸಲು ಸಂಚಾರಿ ಪೋಲಿಸರಿಗೆ, ಕಾನೂನು ಮತ್ತು ಸುವ್ಯವಸ್ಥೆ ಪೋಲಿಸರಿಗೆ, ಆರೋಗ್ಯ ಇಲಾಖೆಯ ಹಿರಿಯ

Scanned with CamScanner

ಪರಿವೀಕ್ಷಕರಿಗೆ, ಮತ್ತು ಘನತ್ಯಾಜ್ಯ ನಿರ್ವಹಣೆಯ ಅಧಿಕಾರಿಗಳಿಗೆ, ಮೇಜರ್ ರೋಡ್ ಅಧಿಕಾರಿಗಳಿಗೆ ದಿನಾಂಕ:26.03.2021 ರಂದು ಶುಕ್ರವಾರ ಸದರಿ ಸ್ಥಳದಲ್ಲಿ ಹಾಜರಿದ್ದು, ತೆರವು ಕಾರ್ಯಚರಣೆಗೆ ಸಹಕರಿಸಬೇಕೆಂದು ವಾರ್ಡ್ ಸಮಿತಿ ಸಭೆಯಲ್ಲಿ ನೋಡಲ್ ಅಧಿಕಾರಿಗಳು ಸೂಚಿಸಿದರು.

10. ಬಿ,ಡಬ್ಲ್ಯೂ.ಎಸ್.ಎಸ್.ಬಿ. ವತಿಯಿಂದ ನಿರ್ವಹಿಸುವಂತಹ 110 ಹಳ್ಳಿಗಳ ಕುಡಿಯುವ ನೀರಿನ ಕಾಮಗಾರಿ ಹಾಗೂ ಒಳಚರಂಡಿ ಕಾಮಗಾರಿ ನಿಧಾನಗತಿಯಲ್ಲಿ ನಡೆದಿದ್ದು, ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿದ್ದು, ಶೀಘ್ರವಾಗಿ ಕಾಮಗಾರಿ ಪೂರ್ಣಗೊಳಿಸಿ, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲು ನೋಡಲ್ ಅಧಿಕಾರಿಗಳು ವಾರ್ಡ್ ಸಮಿತಿ ಸಭೆಯಲ್ಲಿ ಬಿ,ಡಬ್ಲ್ಯೂ.ಎಸ್.ಎಸ್.ಬಿ. ಅಧಿಕಾರಿಗಳಿಗೆ ಹಾಗೂ ಎಲ್ & ಟಿ ಗುತ್ತಿಗೆದಾರರಿಗೆ ಸೂಚಿಸಲಾಯಿತು. ತಪ್ಪಿದ್ದಲ್ಲಿ ಮೇಲಾಧಿಕಾರಿಗಳಿಗೆ ವರದಿ ನೀಡಲು ವಾರ್ಡ್ ಸಮಿತಿ ಸಭೆಯಲ್ಲಿ ನಿರ್ಣಯಿಸಲಾಯಿತು.

11. ಕೋವಿಡ್- 19 ಕರೋನಾ ರೋಗವು 2ನೇ ಹಂತದಲ್ಲಿ ಹರಡುತ್ತಿದ್ದು, ವಾರ್ಡ್ ವ್ಯಾಪ್ತಿಯಲ್ಲಿ 60 ವರ್ಷ ಮೇಲ್ಪಟ್ಟ ಸಾರ್ವಜನಿಕರು ಹಾಗೂ ಬಿ.ಪಿ & ಡಯಾಬಿಟೀಸ್ ಇರುವಂತಹ 45 ರಿಂದ 59 ವರ್ಷದ ಸಾರ್ವಜನಿಕರಿಗೆ ಕೋವೀಡ್ ವ್ಯಾಕ್ಸಿನ್ ಚುಚ್ಚುಮದ್ದು ನೀಡಲು ಆರೋಗ್ಯ ಇಲಾಖೆಯ ವೈದ್ಯಾಧಿಕಾರಿಗಳಿಗೆ ವಾರ್ಡ್ ಸಮಿತಿ ಸಭೆಯಲ್ಲಿ ನೋಡಲ್ ಅಧಿಕಾರಿಗಳು ಸೂಚಿಸಿದರು.

12. ವಾರ್ಡ್ ವ್ಯಾಪ್ತಿಯಲ್ಲಿ ವಿದ್ಯುತ್ ಬೀದಿದೀಪಗಳು ಹಾಳಾಗಿದ್ದು, ದುರಸ್ಥಿಯಲ್ಲಿದ್ದು, ಅವುಗಳನ್ನು ಸರಿಪಡಿಸಲು ಮತ್ತು ಹೊಸದಾಗಿ ವಿದ್ಯುತ್ ಬೀದಿದೀಪಗಳ ಅವಶ್ಯಕತೆ ಇದ್ದು, ಬೀದಿದೀಪಗಳನ್ನು ಅಳವಡಿಸಲು ಬೀದಿದೀಪದ ಎ.ಇ. ರವರಿಗೆ ನೋಡಲ್ ಅಧಿಕಾರಿಗಳು ವಾರ್ಡ್ ಸಮಿತಿ ಸಭೆಯಲ್ಲಿ ಸೂಚಿಸಿದರು.

13. ವಾರ್ಡ್ ವ್ಯಾಪ್ತಿಯಲ್ಲಿ ಚರಂಡಿ ಹೂಳು ಹಾಗೂ ಕಟ್ಟಡಗಳ ವೇಸ್ಟ್ ಮೆಟಿರಿಯಲ್ ಸಾರ್ವಜನಿಕರು ರಸ್ತೆಯ ಮೇಲೆ ಸುರಿಯುತ್ತಿದ್ದು, ಮತ್ತು ಚರಂಡಿ ಹೂಳನ್ನು ಸಾಗಣೆ ಮಾಡಲು ಸ್ಲಿಲ್ಟ್ ಅಂಡ್ ಟ್ರ್ಯಾಕ್ಟರ್ ಕಾಮಗಾರಿಗೆ ಅನುಧಾನ ಇಲ್ಲದಿರುವುದರಿಂದ ಸದರಿ ಸ್ಲಿಲ್ಟ್ ಅಂಡ್ ಟ್ರ್ಯಾಕ್ಟರ್ ಕಾಮಗಾರಿಗೆ ಅನುದಾನ ಒದಗಿಸಿದ್ದಲ್ಲಿ ತ್ಯಾಜ್ಯಗಳನ್ನು ಸ್ವಚ್ಛಗೊಳಿಸಿ ವಾರ್ಡ್ ಸುಸ್ಥಿತಿಯಲ್ಲಿಡಲು ಅನುಧಾನ ಮಂಜೂರು ಮಾಡಲು ವಾರ್ಡ್ ಸಮಿತಿ ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯ ಕೈಗೊಳ್ಳಲಾಯಿತು.

Scanned with CamScanner

14. ವಾರ್ಡ್ ವ್ಯಾಪ್ತಿಯಲ್ಲಿ ಬರುವ ಉದ್ದೇಶಿತ ಆರೋಗ್ಯಮಾತೆ ಮೀನುಗಾರರ ಮಹಿಳಾ ಸಹಕಾರ ಸಂಘವನ್ನು ಸ್ಥಾಪಿಸಲು ಮತ್ತು ಸಿಂಗಸಂದ್ರ ಕೆರೆಯಲ್ಲಿ ಮೀನುಗಾರಿಕೆ ಸಾಗಾಣಿಕೆ ಮಾಡಲು ಆಕ್ಷೇಪಣೆ ಇರುವುದಿಲ್ಲವೆಂದು ನೋಡಲ್ ಅದಿಕಾರಿಗಳು ವಾರ್ಡ್ ಸಮಿತಿ ಸಭೆಯಲ್ಲಿ ತಿಳಿಸಿದರು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ ಮತ್ತು ಸಂಚಾಲಕರು
ವಾರ್ಡ್ ನಂ -191 ಸಿಂಗಸಂದ್ರ

20/3/21

ಅಧ್ಯಕ್ಷರು
ವಾರ್ಡ್‌ಕಮಿಟಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ವಾರ್ಡ್ ನಂ 191, ಸಿಂಗಸಂದ್ರ

**ಪ್ರತಿಗಳು:-**

- ಮಾನ್ಯ ಆಡಳಿತಗಾರರು, ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
- ಮಾನ್ಯ ಆಯುಕ್ತರು, ಬೃ.ಬೆಂ.ಮ.ಪಾಲಿಕೆ ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
- ಮಾನ್ಯ ಶಾಸಕರು, ಬೊಮ್ಮನಹಳ್ಳಿ ವಿಧಾನ ಸಭಾಕ್ಷೇತ್ರ ರವರ ಅವಗಾಹನೆಗೆ ಸಲ್ಲಿಸಿದೆ
- ಮಾನ್ಯ ಶಾಸಕರು, ಬೆಂಗಳೂರು ದಕ್ಷಿಣ ವಿಧಾನ ಸಭಾಕ್ಷೇತ್ರ ರವರ ಅವಗಾಹನೆಗೆ ಸಲ್ಲಿಸಿದೆ
- ಮಾನ್ಯ ಶಾಸಕರು, ಆನೇಕಲ್ ವಿಧಾನ ಸಭಾಕ್ಷೇತ್ರ ರವರ ಅವಗಾಹನೆಗೆ ಸಲ್ಲಿಸಿದೆ
- ವಲಯ ಆಯುಕ್ತರು, ಬೊಮ್ಮನಹಳ್ಳಿ ವಲಯ, ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ
- ಜಂಟಿ ಆಯುಕ್ತರು, ಬೊಮ್ಮನಹಳ್ಳಿ ವಲಯರವರ ಅವಗಾಹನೆಗೆ ಮಂಡಿಸಿದೆ.
- ಉಪ ಆಯುಕ್ತರು, ಬೊಮ್ಮನಹಳ್ಳಿ ವಲಯರವರ ರವರಿಗೆ ಕಳುಹಿಸಿದೆ.
- ಮುಖ್ಯ ಅಭಿಯಂತರರು, ಬೊಮ್ಮನಹಳ್ಳಿ ವಲಯ ರವರಿಗೆ ಸೂಕ್ತ ಕ್ರಮಕ್ಕಾಗಿ
- ಆರೋಗ್ಯಾಧಿಕಾರಿಗಳು, ಬೊಮ್ಮನಹಳ್ಳಿ ವಲಯ ರವರಿಗೆ ಸೂಕ್ತ ಕ್ರಮಕ್ಕಾಗಿ

Scanned with CamScanner

- ಅರಣ್ಯಾಧಿಕಾರಿಗಳು, ಬೊಮ್ಮನಹಳ್ಳಿ ವಲಯ ರವರಿಗೆ ಸೂಕ್ತ ಕ್ರಮಕ್ಕಾಗಿ
- ಡಿ.ಜಿ.ಎಂ. ಗೇಲ್‌ಗ್ಯಾಸ್ ರವರಿಗೆ ಮುಂದಿನ ಕ್ರಮಕ್ಕಾಗಿ
- ಮುಖ್ಯ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ
- ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಮುಂದಿನ ಕ್ರಮಕ್ಕಾಗಿ
- ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಎಂ.ಆರ್.ಸಿ.ಎಲ್ ರವರಿಗೆ ಮುಂದಿನ ಕ್ರಮಕ್ಕಾಗಿ
- ಕಾರ್ಯಪಾಲಕ ಅಭಿಯಂತರರು, ಕೆರೆಗಳ ವಿಭಾಗ, ಬೃ.ಬೆಂ.ಮ.ಪಾ. ರವರಿಗೆ ಮುಂದಿನ ಕ್ರಮಕ್ಕಾಗಿ
- ಪಿ.ಎಸ್.ಐ. ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಸಂಚಾರ, ಪರಪ್ಪನ ಅಗ್ರಹಾರ ಠಾಣೆ
- ಕಂದಾಯ ಅಧಿಕಾರಿ(ಬೇಗೂರು) ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
- ವಾರ್ಡ್ ಸಮಿತಿ ಸದಸ್ಯರು ರವರಿಗೆ ಕಳುಹಿಸಲಾಗಿದೆ.
- ಕಛೇರಿ ಕಡತಕ್ಕೆ

Scanned with CamScanner